ಉಪ್ಪಿನಂಗಡಿ ವಿದ್ಯಾರ್ಥಿನಿಲಯದ ಬಗ್ಗೆ

2976 - ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪುತ್ತೂರು ತಾಲ್ಲೂಕಿನ ಉಪ್ಪಿನಂಗಡಿಯ ಹಿಂದುಳಿದ ವಿದ್ಯಾರ್ಥಿನಿಲಯ ಕಟ್ಟಡ ಬೀಳುವ ಪರಿಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಏನು ಕ್ರಮ ಕೈಗೊಳ್ಳಲಾಗಿದೆ?

ಆ) ಸದರಿ ವಿದ್ಯಾರ್ಥಿನಿಲಯದಲ್ಲಿ ಈಗಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು? ಸದರಿ ಸಂಖ್ಯೆ ಕಡಿಮೆಯಾಗಲು ಕಾರಣಗಳೇನು?

ಇ) ಇಲ್ಲಿರುವ ಸಿಬ್ಬಂದಿಗಳ ಕೊರತೆ ಎಷ್ಟು? ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) ಪುತ್ತೂರು ತಾಲ್ಲೂಕು ಉಪ್ಪಿನಂಗಡಿಯ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯದ ಒಂದು ಗೋಡೆಯಲ್ಲಿ ಬಿರುಕು ಬಂದಿದ್ದು. ಅದನ್ನು ದುರಸ್ತಿ ಮಾಡಲಾಗಿದೆ. ನಿಲಯದ ಒಟ್ಟಾರೆ ದುರಸ್ತಿಗಾಗಿ ಜಿಲ್ಲಾ ವಲಯದಲ್ಲಿ ರೂ.2.00 ಲಕ್ಷ ಅಂದಾಜು ವೆಚ್ಚದಲ್ಲಿ ಕಾಮಗಾರಿಯನ್ನು ಕೂಡಲೇ ಕೈಗೆತ್ತಿಕೊಳ್ಳಲಾಗುತ್ತಿದೆ.

ಆ) ಈ ವಿದ್ಯಾರ್ಥಿನಿಲಯದಲ್ಲಿ ಈಗ 15 ವಿದ್ಯಾರ್ಥಿಗಳು ಇದ್ದು, ಅರ್ಹ ವಿದ್ಯಾರ್ಥಿಗಳಿಂದ ಸಾಕಷ್ಟು ಅರ್ಜಿಗಳು ಬಂದಿಲ್ಲದ್ದ ಪ್ರಯುಕ್ತ ಈ ಸಂಖ್ಯೆ ಕಡಿಮೆ ಆಗಿದೆ.

ಇ) ಸದರಿ ವಿದ್ಯಾರ್ಥಿನಿಲಯದಲ್ಲಿ ಈಗ ಸಿಬ್ಬಂದಿ ಕೊರತೆ ಇರುವುದಿಲ್ಲ.

ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮ ಕುರಿತು

2977 - ಶ್ರೀ ಸಿ. ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮ 1994 ರಡಿಯಲ್ಲಿ ಅಲಂಕಾರಿಕ ಶಿಲೆ ಗಣಿ ಗುತ್ತಿಗೆ ಮಂಜೂರಾತಿಗಾಗಿ ಗ್ರಾಂಟೆಡ್ ಮತ್ತು ಪಟ್ಟಾ ಜಮೀನುಗಳಲ್ಲಿ ಸ್ವೀಕರಿಸಿದ ಅರ್ಜಿಗಳ ಸಂಖ್ಯೆ ಎಷ್ಟು. 1994, 1995,1996 ಮತ್ತು 1997 ರಲ್ಲಿ ಮಾಹೆಯಾನ ಸ್ವೀಕರಿಸಿದ ಅರ್ಜಿಗಳ ವಿವರ ಸಲ್ಲಿಸುವುದು?

ಆ) ಯಾವ ಯಾವ ಅರ್ಜಿದಾರರು : ಸಂಸ್ಥೆಗಳು ಕಲ್ಲುಗಣಿ ಗುತ್ತಿಗೆಗಾಗಿ ಅರ್ಜಿ ಸಲ್ಲಿಸಿದ್ದಾರೆ, ಸ್ವೀಕರಿಸಿದ ಅರ್ಜಿಗಳಲ್ಲಿ ಎಷ್ಟು ಅರ್ಜಿಗಳಿಗೆ ಮಂಜೂರಾತಿ ಅಧಿಸೂಚನೆ ಹೊರಡಿಸಲಾಗಿದೆ ಮತ್ತು ಎಷ್ಟು ಲೈಸನ್ಸ್ ಪುಸ್ತಕಗಳನ್ನು ಎಕ್ಸ್‌ಕ್ಯೂಟ್ ಮಾಡಲಾಗಿದೆ?

ಅರ್ಜಿದಾರರ ಹೆಸರು, ವಿಳಾಸ ಮತ್ತು ಮಂಜೂರಾದ ಅಧಿಸೂಚನೆಯ ದಿನಾಂಕಗಳ ವಿವರ ನೀಡುವುದು?

ಇ) ಪ್ರತಿ ಅರ್ಜಿದಾರರ ಲೈಸನ್ಸ್‌ಗಳು ಎಕ್ಸ್‌ಕ್ಯೂಟ್ ಮಾಡಿರುವ ದಿನಾಂಕ, ಖನಿಜದ ಮಾದರಿ, ಗುತ್ತಿಗೆ ಅವಧಿ, ಮಂಜೂರಾದ ವಿಸ್ತೀರ್ಣ, ಸರ್ವೆ ನಂ. ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾವಾರು ವಿವರಗಳನ್ನು ನೀಡುವುದು?

ಈ) ಮಂಜೂರಾದ ಲೈಸನ್ಸ್‌ಗಳಲ್ಲಿ ಗ್ರಾಂಟೆಡ್ ಮತ್ತು ಪಟ್ಟಾ ಜಮೀನುಗಳಲ್ಲಿ ಮಂಜೂರಾದ ಕಲ್ಲುಗಣಿ ಗುತ್ತಿಗೆ ಸಂಖ್ಯೆ ಎಷ್ಟು ?

ಉ) ಎಷ್ಟು ಅರ್ಜಿಗಳು ತಿರಸ್ಕೃತಗೊಂಡಿವೆ, ಯಾವ ಆಧಾರದ ಮೇಲೆ ತಿರಸ್ಕೃತಗೊಂಡಿವೆ. ಪ್ರತಿ ಅರ್ಜಿಗಳ ವಿವರಣೆ ನೀಡುವುದು. ಎಷ್ಟು ಕಲ್ಲುಗಣಿ ಗುತ್ತಿಗೆ ಅರ್ಜಿಗಳು ಬಾಕಿ ಉಳಿದಿವೆ.

ಶ್ರೀ ಎಸ್.ಡಿ. ಜಯರಾಮ್ (ಗಣಿ ಮತ್ತು ಭೂವಿಜ್ಞಾನ ಸಚಿವರು) :

ಅ) ಮಂಜೂರಾದ ಮತ್ತು ಪಟ್ಟಾ ಜಮೀನುಗಳಲ್ಲಿ ಅಲಂಕಾರಿಕ ಶಿಲೆಗೆ ಕಲ್ಲುಗಣಿ ಪರವಾನಿಗಿ ಕೋರಿ ಸ್ವೀಕರಿಸಿರುವ ಒಟ್ಟು ಅರ್ಜಿಗಳು - 647. 1994ರಿಂದ 1997ರವರೆಗೆ ಮಾಹೆಯಾನ ಸ್ವೀಕರಿಸಿದ ಅರ್ಜಿಗಳ ವಿಪರಗಳನ್ನು ಅನುಬಂಧ - ಎ ನಲ್ಲಿ ನೀಡಲಾಗಿದೆ.

ಆ) ವ್ಯಕ್ತಿಗಳು : ಸಂಸ್ಥೆಗಳು ಕಲ್ಲುಗಣಿ ಗುತ್ತಿಗೆ ಕೋರಿ ಸಲ್ಲಿಸಿರುವ ಅರ್ಜಿಗಳ ವಿವರಗಳನ್ನು ಅನುಬಂಧ - ಎ ನಲ್ಲಿ ನೀಡಲಾಗಿದೆ. ಈ ಅರ್ಜಿಗಳ ಪೈಕಿ 188 ಪ್ರಕರಣಗಳಲ್ಲಿ ಮಂಜೂರಾತಿ ಅಧಿಸೂಚನೆ ಹೊರಡಿಸಿದ್ದು ಅವುಗಳ ವಿವರಗಳನ್ನು ಅನುಬಂಧ 'ಬಿ' ನಲ್ಲಿ ನೀಡಲಾಗಿದೆ. ಈ ರೀತಿ ಮಂಜೂರಾತಿ ನೀಡಿದ ಪ್ರಕರಣಗಳ ಪೈಕಿ 70 ಪ್ರಕರಣಗಳಲ್ಲಿ ಪರವಾನಿಗೆ ವಿಲೇಖಗಳನ್ನು ಸಹಿ ಮಾಡಲಾಗಿದೆ. ಇವುಗಳ ಜಿಲ್ಲಾವಾರು ವಿವರಗಳನ್ನು ಅನುಬಂಧ 'ಸಿ' ನಲ್ಲಿ ನೀಡಲಾಗಿದೆ.

ಈ) 1. ವಿವರಗಳನ್ನು ಅನುಬಂಧ 'ಬಿ'ನಲ್ಲಿ ನೀಡಲಾಗಿದೆ.

2. ಅರ್ಜಿಯನ್ನು ಮತ್ತು ಭದ್ರತಾ ಠೇವಣಿಯನ್ನು ಹಿಂತೆಗೆದುಕೊಂಡ ಅರ್ಜಿದಾರರ ವಿವರವನ್ನು ಅನುಬಂಧ 'ಡಿ' ನಲ್ಲಿ ನೀಡಲಾಗಿದೆ.

ಉ) 1. ತಿರಸ್ಕೃತಗೊಂಡ ಅರ್ಜಿಗಳ ಸಂಖ್ಯೆ : 8 (ವಿವರಗಳನ್ನು ಅನುಬಂಧ 'ಇ' ನಲ್ಲಿ ನೀಡಲಾಗಿದೆ).

2. ಬಾಕಿ ಇರುವ ಕಲ್ಲುಗಣಿ ಗುತ್ತಿಗೆ ಅರ್ಜಿಗಳ ಸಂಖ್ಯೆ - 451

ರಾಜ್ಯದ ರೇಷ್ಮೆ ಕೈಗಾರಿಕೆ ನಿಗಮದ ಖಾಸಗೀಕರಣದ ಬಗ್ಗೆ

2978 - ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?